# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಃ ಉತ್ತರ ಕನ್ನಡ ಃ ಕಾರವಾರ

## ಸ್ಪೆಷಲ್ ಕೇಸ್ ನಂಃ 03/2010

**ಫಿರ್ಯಾದಿ ಃ** ಸರ್ಕಾರದ ಪರವಾಗಿ
ಕಾರವಾರ ಲೋಕಾಯುಕ್ತ ಪೊಲೀಸ ಠಾಣೆ.

**-ವಿರುದ್ಧ-**

**ಆರೋಪಿಃ** ಶೇಷಗಿರಿ ತಂದೆಃ ಈಶ್ವರ ದೊಡ್ಮನೆ

## ಃ ದೋಷಾರೋಪಣೆ ಃ

ಶ್ರೀ ವಿ.ಎಸ್.ಧಾರವಾಡಕರ, ಬಿ.ಕಾಂ. ಎಲ್ಎಲ್.ಬಿ(ಸ್ಪೆಷಲ್) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಉತ್ತರ ಕನ್ನಡ, ಕಾರವಾರ ಆದ ನಾನು,

1. ಶೆಷಗಿರಿ ಈಶ್ವರ ದೊಡ್ಮನೆ,
   45 ವರ್ಷ,
   ಸಾಃ ಕಾನಗೋಡ, ಸಿದ್ದಾಪುರ.
   ಮಾಜಿ ಅಧ್ಯಕ್ಷರು, ಕಾನಗೋಡ ಗ್ರಾಮ ಪಂಚಾಯತ,
   ಸಿದ್ದಾಪುರ ತಾಲ್ಲೂಕು.

ನಿಮ್ಮ ಮೇಲೆ ಆಪಾದಿಸುವುದೇನೆಂದರೆಃ

200-2002 ನೇ ಸಾಲಿನಲ್ಲಿ ಕಾರವಾರ ಲೋಕಾಯುಕ್ತ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಸಿದ್ದಾಪುರ ತಾಲೂಕಿನ ಕಾನಗೋಡ ಗ್ರಾಮ ಪಂಚಾಯತ್‌ನ ಅಧ್ಯಕ್ಷರಾಗಿ ಕೆಲಸ ನಿರ್ವಹಿಸುತ್ತಿದ್ದ ನೀವು ಸ್ವಚ್ಛ ಗ್ರಾಮ ಯೋಜನೆಯ ವೈಯಕ್ತಿಕ ಶೌಚಾಲಯ ಕಾಮಗಾರಿ ಅಡಿಯಲ್ಲಿ ಮೊದಲಿಗೆ 100 ಜನ ಫಲಾನುಭವಿಗಳ ಯಾದಿ ತಯಾರಿಸಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾ ಧಿಕಾರಿಯವರಿಂದ ಅನುಮೋದನೆಯನ್ನು ಪಡೆದು ಕೇವಲ 38 ಜನರಿಗೆ ಮಾತ್ರ ಶೌಚಾಲಯಗಳನ್ನು ಕಟ್ಟಿ ನಂತರ ಆ 100 ಜನರ ಪಟ್ಟಿಯಿಂದ 10 ಫಲಾನುಭವಿಗಳಿಗೆ ಈಗಾಗಲೇ ವೈಯಕ್ತಿಕ ಶೌಚಾಲಯ ಕಾಮಗಾರಿ ಅಡಿಯಲ್ಲಿ ಶೌಚಾಲಯ ನಿರ್ಮಿಸಿದ್ದು , ಅವರನ್ನು ಒಳಗೊಂಡಂತೆ 35 ಜನರನ್ನು ಕೈಬಿಟ್ಟು 65 ಫಲಾನುಭವಿಗಳನ್ನು ಸೇರಿಸಿಕೊಂಡು ಹೊಸದಾಗಿ 135 ಫಲಾನುಭವಿಗಳೊಂದಿಗೆ 200 ಜನರ ಲಿಸ್ಟ್ ತಯಾರಿಸಿ, ಅದಕ್ಕೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರ

ಅನುಮೋದನೆಯನ್ನು ಪಡೆಯದೇ ಈ 200 ಜನರ ಫಲಾನುಭವಿಗಳ ಪಟ್ಟಿಯಲ್ಲಿ 59 ಜನರಿಗೆ ಮಾತ್ರ ವೈಯಕ್ತಿಕ ಶೌಚಾಲಯದಡಿ ಶೌಚಾಲಯವಿದ್ದರೂ ಗ್ರಾಮಪಂಚಾಯತಿಯಲ್ಲಿ ಲಭ್ಯವಿದ್ದ ದಾಖಲಾತಿ ಪುಸ್ತಕದಲ್ಲಿ 111 ಜನ ಫಲಾನುಭವಿಗಳ ಹೆಸರು ಬರೆದಿದ್ದು , ಅದರಲ್ಲಿ ಮೇಲ್ಕಂಡ ಫಲಾನುಭವಿಗಳ ಲಿಸ್ಟನಲ್ಲಿನ ಶೌಚಾಲಯ ಕಟ್ಟಿರುವವರ ಹೆಸರು (69 ಜನರ ಹೆಸರು) ಬರೆದಿದ್ದು , ಪಟ್ಟಿಯಲ್ಲಿ ಇಲ್ಲದೇ ಇರುವ 30 ಜನರ ಹೆಸರನ್ನು ಸಹ ಬರೆದು ಸ್ವಚ್ಛಗ್ರಾಮ ಯೋಜನೆ ವೈಯಕ್ತಿಕ ಶೌಚಾಲಯಗಳ ಫಲಾನುಭವಿಗಳ ಪಟ್ಟಿ ತಯಾರಿಸುವಲ್ಲಿ , ಶೌಚಾಲಯ ನಿರ್ಮಿಸುವಲ್ಲಿ , ಸ್ವಚ್ಛಗ್ರಾಮ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದ ಸರಕಾರದ ಸುತ್ತೋಲೆಯಂತೆ ಕಾರ್ಯನಿರ್ವಹಿಸಿರುವುದಿಲ್ಲಾ, ಅಲ್ಲದೇ 210 ವೈಯಕ್ತಿಕ ಶೌಚಾಲಯಗಳನ್ನು ಕಟ್ಟಲು ರೂ.6.30 ಲಕ್ಷ ಮಂಜೂರಾಗಿದ್ದರೂ, ಶೌಚಾಲಯಗಳನ್ನು ಕಟ್ಟಲು ಫಲಾನುಭವಿಗಳಿಂದ ರೂ.500/- ವಂತಿಗೆ ಪಡೆದು ಅಥವಾ ಫಲಾನುಭವಿಯ ಶ್ರಮ ಪಡೆಯುವ ಮೂಲಕ ಪ್ರತಿಯೊಂದು ವೈಯಕ್ತಿಕ ಶೌಚಾಲಯಕ್ಕೆ ರೂ.3,000/- ರಂತೆ ಸಹಾಯ ಧನವನ್ನು ಕೊಡಬೇಕಾಗಿದ್ದರೂ ಸದರಿ ಹಣವನ್ನು 1 ಮತ್ತು 2ನೇ ಆರೋಪಿತರು ಫಲಾನುಭವಿಗಳಿಗೆ ಕೊಡದೇ ಸರಕಾರಿ ಹಣವನ್ನು ಅಪರಾ ತಪರಾ ಮಾಡುವ ಉದ್ದೇಶದಿಂದ ಆದಿಶಕ್ತಿ ಇಂಡಸ್ಟ್ರೀಸ್ ಶಿರಳಗಿ ಮಾಲೀಕರಿಗೆ 100 ಶೌಚಾಲಯಗಳನ್ನು ಕಟ್ಟಿಕೊಡಲು ವರ್ಕ ಆರ್ಡರ್ ಕೊಟ್ಟಿದ್ದರ ಬಗ್ಗೆ ದಾಖಲಾದ ಪ್ರಕರಣಕ್ಕೆ ಸಂಬಧಿಸಿದಂತೆ ಸ್ಥಳ ಪಂಚನಾಮೆಯ ಸಮಯದಲ್ಲಿ 111 ಶೌಚಾಲಯಗಳು ಮಾತ್ರ ಇದ್ದದ್ದು ಕಂಡುಬಂದಿದ್ದರೂ ಮತ್ತು ಅದರಲ್ಲಿ 6 ಶೌಚಾಲಯಗಳು ಸ್ವಂತ ಖರ್ಚಿನಲ್ಲಿ ಮತ್ತು 4 ಶೌಚಾಲಯಗಳು ನಿರ್ಮಲ ಕರ್ನಾಟಕ ಯೋಜನೆಯ ಅಡಿಯಲ್ಲಿ ಕಟ್ಟಿಕೊಂಡಿದ್ದವರನ್ನೂ ವೈಯಕ್ತಿಕ ಶೌಚಾಲಯಗಳ ಫಲಾನುಭವಿಯ ಪಟ್ಟಿಯಲ್ಲಿ ಸೇರಿಸಿ ಅವರಿಗೆ ಯಾವುದೇ ಹಣವನ್ನು ನೀಡದೇ ಇರುವುದು ಮತ್ತು 99 ಶೌಚಾಲಯಗಳನ್ನು ಮಾತ್ರ ಆದಿಶಕ್ತಿ ಇಂಡಸ್ಟ್ರೀಸ್ ಶಿರಳಗಿ ಇವರಿಂದ ಕಟ್ಟಿಸಿದ್ದರೂ ಮತ್ತು ಫಲಾನುಭವಿಗಳಿಗೆ ವರದಿಯಲ್ಲಿ ತೋರಿಸಿರುವಂತೆ ಶೌಚಾಲಯಗಳನ್ನು ನಿರ್ಮಿಸದೇ ಇದ್ದರೂ ನೀವು ಕಾಮಗಾರಿಗಳ ಪರಿವೀಕ್ಷಣೆ ಮಾಡಲಾಗಿ ತೃಪ್ತಿಕರವಾಗಿದೆ ಎಂದು ದೃಢೀಕರಿಸಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ಕಾರವಾರ ಮತ್ತು ಉಪ ನಿರ್ದೇಶಕರು , ಭೂಸೇನಾ ನಿಗಮ ಕಾರವಾರ ಇವರಿಗೆ ವರದಿಯನ್ನು ಕಳುಹಿಸಿ ಮುಂದಿನ ಕಾಮಗಾರಿ ಕೆಲಸಕ್ಕೆ ರೂ.7.10 ಲಕ್ಷ ಬಿಡುಗಡೆ ಮಾಡಲು ಕೋರಿದಂತೆ ದಿನಾಂಕಃ 11.03.2003 ರಂದು ಉಪ ನಿರ್ದೇಶಕರು, ಭೂ ಸೇನಾ ನಿಗಮ ಇವರು ಕಾನಗೋಡ ಸ್ವಚ್ಛ ಗ್ರಾಮ ಸಮಿತಿಗೆ ಚೆಕ್ ನಂ.646455 ರಲ್ಲಿ ರೂ.7.10 ಲಕ್ಷ ಬಿಡುಗಡೆ ಮಾಡಿ ನಿಮಗೆ ಕಾಮಗಾರಿ ನಡೆಯುತ್ತಿರುವ ಸ್ಥಳಗಳಿಗೆ ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಲು ಆದೇಶ ನೀಡಿದ್ದರೂ 3ನೇ ಆರೋಪಿ ದೇವೇಂದ್ರ ನಾಯ್ಕ ರವರು ದಿನಾಂಕಃ 31.03.2003 ರಂದು

ಕಾರ್ಯನಿರ್ವಾಹಕ ಇಂಜಿನೀಯರ ಶಿರಸಿ ರವರಿಗೆ ಕಾಮಗಾರಿಗಳ ಪ್ರಗತಿ ವರದಿ ಸಲ್ಲಿಸಿದ್ದು , ಕೇವಲ 99 ಶೌಚಾಲಯಗಳನ್ನು ಮಾತ್ರ ನಿರ್ಮಿಸಿ, ಉಳಿದ 111 ಶೌಚಾಲಯಗಳನ್ನು ನಿರ್ಮಿಸದೇ ಇದ್ದರೂ ಸ್ವಚ್ಛಗ್ರಾಮ ಯೋಜನೆಯ ಗುರಿಯಂತೆ 210 ಶೌಚಾಲಯಗಳನ್ನು ನಿರ್ಮಿಸಿದ್ದು , ರೂ.6.30 ಲಕ್ಷ ಖರ್ಚು ಮಾಡಲಾಗಿದೆ ಎಂದು ವರದಿಯಲ್ಲಿ ತೋರಿಸಿ ನೀವು 2 ಮತ್ತು 3ನೇ ಆರೋಪಿತರೊಂದಿಗೆ ಸೇರಿಕೊಂಡು 111 ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸದೇ ರೂ.3.33 ಲಕ್ಷ ಸರಕಾರಿ ಹಣ ಅಪರಾ-ತಪರಾ ಮಾಡಿ ಗುರಿಯಂತೆ 210 ಶೌಚಾಲಯಗಳನ್ನು ಪೂರ್ಣಗೊಳಿಸಿರುವುದಾಗಿ ಮತ್ತು ಅದಕ್ಕೆ ರೂ.6.30 ಲಕ್ಷ ಖರ್ಚು ಮಾಡಲಾಗಿದೆ ಎಂದು ತಪ್ಪು ವರದಿ ನೀಡುವುದರೊಂದಿಗೆ 2 ಮತ್ತು 3ನೇ ಆರೋಪಿತರು ಸರಕಾರಿ ಹಣ ಅಪರಾ ತಪರಾ ಮಾಡಿದ್ದರೂ ತಪ್ಪು ವರದಿ ನೀಡಿ 1ಮತ್ತು 2ನೇ ಆರೋಪಿತರೊಂದಿಗೆ ಸೇರಿಕೊಂಡು ಸರಕಾರಿ ಹಣ ದುರುಪಯೋಗವಾಗಲು ಕಾರಣರಾಗಿದ್ದೀರಿ ಮತ್ತು ಈ ಮೂಲಕ ಲಂಚ ಪ್ರತಿಬಂಧಕ ಕಾಯ್ದೆ-1988 ಕಲಂ 13(1) (ಸಿ) (ಡಿ) ಸಹ ಕಲಂ 13(2) ರ ಮೇರೆಗೆ ದಂಡನೀಯವಾದ ಅಪರಾಧವನ್ನು ಈ ಸೆಷನ್ಸ್ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಸದರಿ ಆರೋಪದ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 28 ನೇ ಡಿಸೆಂಬರ್ 2017.

(ವಿ.ಎಸ್.ಧಾರವಾಡಕರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು.
ಉತ್ತರ ಕನ್ನಡ, ಕಾರವಾರ

**ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಃ ಉತ್ತರ ಕನ್ನಡ ಃ ಕಾರವಾರ**

**ಸ್ಪೆಷಲ್ ಕೇಸ್ ನಂಃ 03/2010**

**ಫಿರ್ಯಾದಿ** ಃ ಸರ್ಕಾರದ ಪರವಾಗಿ
ಕಾರವಾರ ಲೋಕಾಯುಕ್ತ ಪೊಲೀಸ ಠಾಣೆ.

**-ವಿರುದ್ಧ-**

**ಆರೋಪಿಃ** ಶೇಷಗಿರಿ ಈಶ್ವರ ದೊಡ್ಮನೆ

ಆರೋಪಿಯ ಹೆಸರು ಃ ಶೇಷಗಿರಿ

ತಂದೆಯ ಹೆಸರು ಃ ಈಶ್ವರ ದೊಡ್ಮನೆ

ವಯಸ್ಸು ಃ

ಉದ್ಯೋಗ ಃ

ವಾಸ ಃ

**ಃ ಆರೋಪಿಯ ಹೇಳಿಕೆ ಃ**

ಪ್ರಶ್ನೆಃ ನಿಮ್ಮ ಮೇಲೆ ಮಾಡಿದ ದೋಷಾರೋಪಣೆಗಳು ನಿಮಗೆ ತಿಳಿಯಿತೆ?

ಉತ್ತರಃ

ಪ್ರಶ್ನೆಃ ನೀವು ತಪ್ಪು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕೆಂದು ಬಯಸುತ್ತಿರಾ?

ಉತ್ತರಃ

ಮೇಲೆ ಹೇಳಿದ ದೋಷಾರೋಪಣೆಗಳನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.

ದಿನಾಂಕಃ 28 ನೇ ಡಿಸೆಂಬರ್ 2017.

**(ವಿ.ಎಸ್.ಧಾರವಾಡಕರ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು.
ಉತ್ತರ ಕನ್ನಡ, ಕಾರವಾರ.